ಮಧ್ಯೆ ಸಾಕಷ್ಟು ಕೋ ಆರ್ಡಿನೇಷನ್ ಬೇಕಾಗುತ್ತದೆ ಆ ಕೋಆರ್ಡಿನೇಷನ್ ಅಭಾವವನ್ನು ಈಗ ನಾನು ನೋಡುತ್ತಿದ್ದೇನೆ ಆದುದರಿಂದ ಹೆಚ್ಚಿನ ಕೋಆರ್ಡಿನೇಷನ್ ತರುವುದಕ್ಕೆ ನಾನು ಡೆವಲಪ್‌ಮೆಂಟ್ ಕಮಿಷನರ್‌ರವರಿಗೆ ಆದೇಶವನ್ನು ಕೊಟ್ಟು ಇಂತಹ ನೀರಿನ ಸರಬರಾಜು ಯೋಜನೆಗಳೇನಿವೆ ಅವುಗಳಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ಸಕ್ರಿಯವಾಗಿ ಪಾತ್ರವಹಿಸುವುದಕ್ಕೆ ಮತ್ತೆ ಅವರಿಬ್ಬರಲ್ಲಿ ಹಚ್ಚು ಸಮನ್ವಯ ಸಾಧಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ

ಮೈಸೂರು ನಗರದಲ್ಲಿ ಎ ಡಿ ಬಿ ನೆರವಿನಿಂದ ರಸ್ತೆಗಳ ಡಾಂಬರೀಕರಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3(337)

ಪ್ರಶ್ನಿಸಿದವರು ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ)

ಉತ್ತರಿಸಬೇಕಾದವರು ಡಿ ಬಿ ಚಂದ್ರೇಗೌಡ (ಕಾನೂನು ಸಂಸದೀಯ ವ್ಯವಹಾರ ಮತ್ತು ಕೆ ಯು ಐ ಡಿ ಎಫ್ ಸಿ ಸಚಿವರು)

ಪ್ರಶ್ನೆ

1) ಮೈಸೂರು ನಗರದಲ್ಲಿ ಎ ಡಿ ಬಿ ನೆರವಿನಿಂದ ಡಾಂಬರೀಕರಣ ಪೂರ್ಣಗೊಳಿಸಿರುವ ರಸ್ತೆಗಳು ಯಾವುವು ಡಾಂಬರೀಕರಣ ಪೂರ್ಣಗೊಳಿಸಬೇಕಾದ ರಸ್ತೆಗಳು ಯಾವುವು?

2) ಯಾವಾಗ ಡಾಂಬರೀಕರಣ ಕಾರ್ಯ ಪೂರ್ಣಗೊಳಿಸಲಾಗುವುದು?

3) ಡಾಂಬರೀಕರಣದ ಗುಣಮಟ್ಟ ಉತ್ತಮವಾಗಿದೆಯೆ ?

ಉತ್ತರ

1 ಮೈಸೂರು ನಗರದ ಅನೇಕ ರಸ್ತೆಗಳ ಡಾಂಬರೀಕರಣ ಕಾರ್ಯ ಎ ಡಿ ಬಿ ನೆರವಿನಿಂದ ಎರಡು ಪ್ಯಾಕೇಜ್‌ಗಳಲ್ಲಿ ಕೈಗೊಳ್ಳಲಾಗುತ್ತಿದ್ದು, ಈ ಕೆಳಕಂಡ ರಸ್ತೆಗಳ ಡಾಂಬರೀಕರಣ ಪೂರ್ಣಗೊಂಡಿದೆ

ಮಧ್ಯಂತರ ಮರ್ತುಲರಸ್ತೆ

1	ಕಾಂತರಾಜೀರಸ್ ರಸ್ತೆ (ಒಲ್ಲಾಳ್ ವೃತ್ತದಿಂದ ಕೆ ಜಿ ಕೊವ್ವಲ್ ವೃತ್ತದವರಗೆ)	0 375 ಕಿ ಮಿ
2	ಕಾಂತರಾಜೀರಸ್ ರಸ್ತೆ (ಆದಿಚುಂಚನಗಿರಿ ರಸ್ತೆಯಿಂದ ವಿಶ್ವಮಾನವ ಜೋಡಿ ರಸ್ತೆವರೆಗೆ)	0 675 ಕಿ ಮಿ
3	ವಿಶ್ವಮಾನವ ಜೋಡಿ ರಸ್ತೆ (ಬೋಗಾದಿ ರಸ್ತೆವರೆಗೆ)	1 150ಕಿ ಮಿ
4	ವಿಶ್ವವಿದ್ಯಾನಿಲಯ ರಸ್ತೆ (ಹುಣಸೂರು ರಸ್ತೆಯವರಗೆ)	1 300 ಕಿ ಮಿ
5	ಹುಣಸೂರು ರಸ್ತೆ (ದೇವಸ್ಥಾನದ ರಸ್ತೆವರೆಗೆ)	0 350 ಕಿ ಮಿ
6	ದೇವಸ್ಥಾನ ರಸ್ತೆ (ಪ್ರಿನ್ಸ್ಸ್ ರಸ್ತೆವರೆಗೆ)	1 350 ಕಿ ಮಿ
7	ಪ್ರಿನ್ಸ್ಸ್ ರಸ್ತೆ (ಆಕಾಶವಾಣಿ ವೃತ್ತದವರೆಗೆ)	0 550 ಕಿ ಮಿ
8	ಅಂಡರ್ ಬ್ರಿಡ್ಜ್ ರಸ್ತೆ (ಶ್ರೀ ಎ ರಾಮಣ್ಣ ವೃತ್ತದವರೆಗೆ)	0 55 ಕಿ ಮಿ
9	ಸಯ್ಯಾಜರಾವ್ ರಸ್ತೆ (ಹೈವೆ ಸರ್ಕಲ್‌ವರೆಗೆ)	0 750 ಕಿ ಮಿ
10	ನ್ಯೂ ಬನ್ನಿಮಂಟಪ ರಸ್ತೆ (ಬಂಗಳೂರು ಮೈಸೂರು ರಸ್ತೆವರೆಗೆ)	1 175 ಕಿ ಮಿ
11	ಬೆಂಗಳೂರು ಮೈಸೂರು ರಸ್ತೆ (ಸರ್ಕಾರಿ ಅತಿಥಿ ಗೃಹದವರೆಗೆ)	1 700 ಕಿ ಮಿ
12	ಅಪ್ಪಾ ರಸ್ತೆ (ರೂರಲ್ ಎಸ್ ಪಿ ಆಫೀಸ್‌ವರೆಗೆ)	0 925 ಕಿ ಮಿ
13	ವಸಂತ ಮಹಲ್ ರಸ್ತೆ (ಶ್ರೀ ಶಾಂತವೇರಿ ಗೋಪಾಲಗೌಡ ವೃತ್ತದವರೆಗೆ)	0 600 ಕಿ ಮಿ
14	ಕಾರಂಜಿ ಕೆರೆ ದಂಡೆಯ ರಸ್ತೆ (ರೇನ್‌ಕೋರ್ಸ್ ರಸ್ತೆವರೆಗೆ)	1 35 ಕಿ ಮಿ

15	ರೇಸ್ ಕೋರ್ಸ್ ರಸ್ತೆ (ಲಾರಿ ನಿಲ್ದಾಣದವರೆಗೆ)	1 625 ಕಿ ಮೀ
16	ಸ್ಮಶಾನ ರಸ್ತೆ (ಊಟಿ ರಸ್ತೆವರೆಗೆ)	0 675 ಕಿ ಮೀ
17	ಜಾನ್ಸಿಲಕ್ಷ್ಮಿಬಾಯಿ ರಸ್ತೆ (ಶ್ರೀ ಹೆಮ್ಮಿಗೆ ವೃತ್ತದವರೆಗೆ)	2 125 ಕಿ ಮೀ
18	ಕಾಂತರಾಜಅರಸ್ ರಸ್ತೆ (ಒಲ್ಲಾಳ್ ವೃತ್ತದವರೆಗೆ)	0 150 ಕಿ ಮೀ
	ಒಟ್ಟು	17 375 ಕಿ ಮೀ

48 ನಗರ ರಸ್ತೆಗಳು

1	ರಾಜೇಂದ್ರನಗರ ರಸ್ತೆ	1 430 ಕಿ ಮೀ
2	ಶಿವಾಜಿ ಮುಖ್ಯ ರಸ್ತೆ	0 925 ಕಿ ಮೀ
3	ಮಿಷನ್ ಆಸ್ಪತ್ರೆ ರಸ್ತೆ	0 750 ಕಿ ಮೀ
4	ಕಾಳಮ್ಮ ಗುಡಿ ರಸ್ತೆ	0 900 ಕಿ ಮೀ
5	ನಜರ್‌ಬಾದ್ ರಸ್ತೆ	0 300 ಕಿ ಮೀ
6	ಲೋಕರಂಜನ್ ಮಹಲ್ ರಸ್ತೆ	0 400 ಕಿ ಮೀ
7	ವಿನಯಮಾರ್ಗ ರಸ್ತೆ	1 650 ಕಿ ಮೀ
8	ಶಾಲಿವಾಹನ ರಸ್ತೆ	1 575 ಕಿ ಮೀ
9	ರಮಾವಿಲಾಸ ರಸ್ತೆ	0 920 ಕಿ ಮೀ
10	ಚಾಮರಾಜ ಜೋಡಿ ರಸ್ತೆ	1 025 ಕಿ ಮೀ
11	ವಿದ್ಯಾರಣ್ಯಪುರಂ 16ನೇ ಮುಖ್ಯ ರಸ್ತೆ	1 275 ಕಿ ಮೀ
12	ಜೆ ಎಲ್ ಬಿ ರಸ್ತೆ	2 250 ಕಿ ಮೀ
13	ಕಾಮಾಕ್ಷಿ ಆಸ್ಪತ್ರೆ ರಸ್ತೆ	0 940 ಕಿ ಮೀ

14	ಕಾಂತರಾಜಅರಸ್ ರಸ್ತೆ	1 175 ಕಿ ಮಿ
15	ಸರಸ್ವತಿಪುರಂ 5ನೇ ಕ್ರಾಸ್ ರಸ್ತೆ	0 925 ಕಿ ಮಿ
16	ಈಜುಕೊಳದ ರಸ್ತೆ (ಸರಸ್ವತಿಪುರಂ)	0 775 ಕಿ ಮಿ
17	ಧನ್ವಂತ್ರಿ ರಸ್ತೆ	0 775 ಕಿ ಮಿ
18	ತ್ಯಾಗರಾಜ ರಸ್ತೆ	0 360 ಕಿ ಮಿ
19	ನಾರಾಯಣಶಾಸ್ತ್ರಿ ರಸ್ತೆ	2 760 ಕಿ ಮಿ
20	ಕುಂಬಾರಕೊಪ್ಪಲು ಮುಖ್ಯ ರಸ್ತೆ	0 975 ಕಿ ಮಿ
21	ಕಾಂಟೂರು ರಸ್ತೆ	1 775 ಕಿ ಮಿ
22	ಆದಿಚುಂಚನಗಿರಿ ರಸ್ತೆ	2 250 ಕಿ ಮಿ
23	ಇಂಡಸ್ಟ್ರಿಯಲ್ ಸಬರ್ಬ್	1 485 ಕಿ ಮಿ
24	ವಾಲ್ಮೀಕಿ ರಸ್ತೆ	1 010 ಕಿ ಮಿ
25	ಆದಿಪಂಪ ರಸ್ತೆ	0 500 ಕಿ ಮಿ
26	ಡಿ ಸುಬ್ಬಯ್ಯ ರಸ್ತೆ	0 610 ಕಿ ಮಿ
27	ಅನಿಕೇತನ ರಸ್ತೆ	1 775 ಕಿ ಮಿ
28	ಕೆಸರೆ ಕೂಡು ರಸ್ತೆ	0 800 ಕಿ ಮಿ
29	ಧಿಯೋಬಾಲ್ಡ್ ರಸ್ತೆ	0 850 ಕಿ ಮಿ
30	ಬನ್ನಿಮಂಟಪ ಇಂಡಸ್ಟ್ರಿಯಲ್ ರಸ್ತೆ	1 25 ಕಿ ಮಿ
31	ಜಾವಾ ಫ್ಯಾಕ್ಟರಿ ರಸ್ತೆ	1 20 ಕಿ ಮಿ
32	ಅಕ್ಬರ್ ರಸ್ತೆ	0 90 ಕಿ ಮಿ
33	ಕಬೀರ್ ರಸ್ತೆ	0 75 ಕಿ ಮಿ

34	ಬೆಂಕಿ ನವಾಬ ರಸ್ತೆ	0 59 ಕಿ ಮಿ
35	ಸಾಡೇ ರಸ್ತ	0 40 ಕಿ ಮಿ
	ಒಟ್ಟು	38 230ಕಿ ಮಿ
	ಒಟ್ಟು	55 605ಕಿ ಮಿ

ಡಾಂಬರೀಕರಣ ಪೂರ್ಣ ಗೊಳಿಸಬೇಕಾದ ರಸ್ತೆಗಳು

ಈ ಕೆಳಕಂಡ ರಸ್ತೆಗಳ ಡಾಂಬರೀಕರಣ ಪೂರ್ಣಗೊಳ್ಳಬೇಕಾಗಿದೆ

ಮಧ್ಯಂತರ ವರ್ತುಲ ರಸ್ತೆ

1	ಕಾಂತರಾಜ ಅರಸ್ ರಸ್ತೆ (ಆದಿಚುಂಚನಗಿರಿ ರಸ್ತ ವೃತ್ತವರೆಗೆ)	0 700 ಕಿ ಮಿ
2	ಅಂಡರ್ ಬ್ರಡ್ಜ್ ರಸ್ತೆ (ಸಯ್ಯಾಜಿರಾವ್ ರಸ್ತೆವರೆಗೆ)	0 425 ಕಿ ಮಿ
	ಒಟ್ಟು	1 125 ಕಿ ಮಿ

ನಗರ ರಸ್ತೆ

(ಅ) ಭಾಗಶ ಪೂರ್ಣಗೊಳ್ಳಬೇಕಾಗಿರುವ ರಸ್ತೆಗಳು

1	ಕಾಳಮ್ಮ ಗುಡಿ ಬೀದಿ	1 200 ಕಿ ಮಿ
2	ನಜರ್‌ಬಾದ್ ರಸ್ತೆ	0 650 ಕಿ ಮಿ
3	ಲೋಕರಂಜನ್ ಮಹಲ್ ರಸ್ತೆ	0 750 ಕಿ ಮಿ
4	ಆದಿವಂಪ ರಸ್ತೆ	1 380 ಕಿ ಮಿ
5	ಸಾಡೇ ರಸ್ತೆ	1 050 ಕಿ ಮಿ
	ಒಟ್ಟು	5 030 ಕಿ ಮಿ

(ಆ) ಪೂರ್ಣಗೊಳ್ಳಬೇಕಾಗಿರುವ ರಸ್ತೆಗಳು

1	ಚಂದ್ರಗುಪ್ತ ರಸ್ತೆ	0 283 ಕಿ ಮಿ
2	ಹರ್ಷ ರಸ್ತೆ	0 375 ಕಿ ಮಿ
3	ವಿನೋಬಾ ರಸ್ತೆ	0 825 ಕಿ ಮಿ
4	ರಾಮಾನುಜ ರಸ್ತೆ	2 275 ಕಿ ಮಿ
5	ಕಾಳಿದಾಸ ರಸ್ತೆ	1 650 ಕಿ ಮಿ
6	ಗೋಕುಲಂ ರಸ್ತೆ	1 875 ಕಿ ಮಿ
7	ಮೇಟಗಳ್ಳಿ 12ನೇ ಮುಖ್ಯ ರಸ್ತೆ	0 425 ಕಿ ಮಿ
8	ಬಸವೇಶ್ವರ ರಸ್ತೆ	1 000 ಕಿ ಮಿ
9	ಸೇಂಟ್ ಮೇರಿಸ್ ರಸ್ತೆ	1 475 ಕಿ ಮಿ
10	ಕೆ ಆರ್ ಆಸ್ಪತ್ರೆ ರಸ್ತೆ	0 658 ಕಿ ಮಿ
11	ಮಾನ್ಕ್ ರಸ್ತೆ	0 450 ಕಿ ಮಿ
12	ಗಾಯಿತ್ರಿವುರಂ ಮುಖ್ಯ ರಸ್ತೆ	1 125 ಕಿ ಮಿ
13	ಆನೆ ನಾರೋಟ್ ರಸ್ತೆ	0 675 ಕಿ ಮಿ
	ಒಟ್ಟು	12 691 ಕಿ ಮಿ
	ಒಟ್ಟು	18846 ಕಿ ಮಿ

2) (ಅ) ಮಧ್ಯಂತರ ವರ್ತುಲ ರಸ್ತೆ- 2002ನೇ ಮಾರ್ಚ್ ಮಾಹೆಯ ಕೊನೆಗೆ ವೂರ್ಣಗೊಳ್ಳವುದು

(ಆ) ನಗರ ರಸ್ತೆಗಳು - 2002ನೇ ಮೇ ಮಾಹೆಯ ಕೊನೆಗೆ ಪೂರ್ಣಗೊಳ್ಳುವುದು

3) ಹೌದು

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಮಾನ್ಯ ಅಧ್ಯಕ್ಷರೆ, ಕಳೆದ ಸರ್ಕಾರದಲ್ಲಿ ಎ ಡಿ ಬಿ ಎಂಬ ಏಡ್ಸ್ ರೋಗಕ್ಕೂ ಮಾರಕವಾದಂಥ ಸಾಲವನ್ನು ತೆಗೆದುಕೊಂಡು ಇಷ್ಟು ಪುರಸಭೆಗಳಿಗೆ ಮತ್ತು ನಗರ ಸಭೆಗಳಿಗೆ ನಿಜಕ್ಕೂ ಕೂಡ ಇದು ಮಾರಕವಾಗಿದೆ ನಾಗರೀಕ ಸೌಲಭ್ಯಗಳನ್ನು ಕೊಡಬೇಕು, ರಸ್ತೆ ಮಾಡಬೇಕು, ಒಳಚರಂಡಿ ವ್ಯವಸ್ಥೆ ಮಾಡಬೇಕೆಂದು ಸಾಲವನ್ನು ತೆಗೆದುಕೊಂಡರು ಅದರ ಕೆಲಸವನ್ನು ನಾಗಾರ್ಜುನ ಕನ್‌ಸ್ಟ್ರಕ್ಷನ್ ಎಂಬ ಕಂಪನಿಗೆ ಕೊಟ್ಟರು ಆದರ ಆ ಕಂಪನಿಯವರು ಸಬ್‌ಲೀಸ್ ಮಾಡಿದರು "ಲಂಬಲಿ ಕುಡಿಯುವವನಿಗೆ ಮೀಸೆ ಹಿಡಿಯಲು ಇಬ್ಬರು" ಎಂಬಂತೆ ಆಗಿದೆ! ಮೈಸೂರು ನಗರದಲ್ಲಿ ನಗರ ಪಾಲಿಕೆಯಿಂದ ನಾಗರೀಕ ಸೌಲಭ್ಯವನ್ನು ಕೊಡಲು ಅಸಮರ್ಥವಾಗಿರುವ ಈ ಸಂದರ್ಭದಲ್ಲಿ ಮೂರು ವರ್ಷಕ್ಕೂ ಮೇಲ್ಪಟ್ಟಾಗಿರುವ ಡಾಂಬರೀಕರಣವನ್ನೇ ಇನ್ನೂ ಮುಗಿಸಿಲ್ಲ ಸಾಲಕ್ಕೆ ಬಡ್ಡಿಯನ್ನು ಕಟ್ಟಿ ಮೈಸೂರಿನ ನಗರ ಪಾಲಿಕೆಯವರು ಬಡ್ಡಿ ಮಕ್ಕಳಾಗುತ್ತಿದ್ದೇವೆಂದರೆ ತಪ್ಪಾಗಲಾರದು ಇಂಥ ಪರಿಸ್ಥಿತಿಯಲ್ಲಿ ಎ ಡಿ ಬಿ ಕೆಲಸಗಳು ಇನ್ನೂ ಕೂಡ ಪೂರ್ಣವಾಗಿಲ್ಲ ಇದಕ್ಕೆ ಕಾರಣವೇನು? ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇದರಿಂದ ಮೈಸೂರು ನಗರದ ನಾಗರೀಕರಿಗೆ ಆಗತಕ್ಕಂಥ ತೊಂದರೆಗಳು ಏನು ಎನ್ನತಕ್ಕದ್ದನ್ನು ಅರ್ಥೈಸಿಕೊಂಡಿದ್ದೀರಾ ಎಂಬುದು ನನ್ನ ಕೋರಿಕೆ

ಶ್ರೀ ಡಿ ಬಿ ಚಂದ್ರೇಗೌಡ ಮಾನ್ಯ ಅಧ್ಯಕ್ಷರೆ, ವಿಶೇಷ ಅನುದಾನವನ್ನು ಎ ಡಿ ಬಿ ನೆರವಿನೊಂದಿಗೆ ಈ ಕಾಮಗಾರಿಯನ್ನು ತಗೆದುಕೊಂಡಿದ್ದೇವೆ ಈ ಕಾಮಗಾರಿಯಲ್ಲಿ ಎರಡು ಭಾಗಗಳಿವೆ ಒಂದು ಮಧ್ಯಂತರ ವರ್ತುಲ ರಸ್ತೆ ಸುಮಾರು 18 5 ಕಿ ಮೀ ಮತ್ತೊಂದು ಐವತ್ತು ಕಿಲೋ ಮೀಟರ್ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿ ಈ ಎರಡೂ ಕಾಮಗಾರಿಗಳನ್ನು ಮಾನ್ಯ ಸದಸ್ಯರು ಹೇಳಿರುವಂತೆ ಮೆ ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್, ಹೈದ್ರಾಬಾದ್ ಇವರಿಗೆ ವಹಿಸಿಕೊಡಲಾಗಿದೆ ಮಾನ್ಯ ಸದಸ್ಯರು ಹೇಳಿದಂತೆ ಸಬ್‌ಲೀಸ್ ವ್ಯವಸ್ಥೆಯನ್ನು ಕಾರ್ಪೊರೇಷನ್‌ನವರು ಮಾಡಿಕೊಂಡಿರುತ್ತಾರೆ ಅದರ ಬಗ್ಗೆ ನಮಗೆ ಮಾಹಿತಿ ಇಲ್ಲ ಆದರೆ ನಮ್ಮ ಸರ್ಕಾರದಲ್ಲಿರುವ ಮಾಹಿತಿಯ ಪ್ರಕಾರ ಆ ಕೆಲಸವನ್ನು ನಾಗಾರ್ಜುನ ಕಂಪನಿಯವರೇ ಮಾಡುತ್ತಿದ್ದಾರೆ ಆ ಕಂಪನಿಯ ಮೇಲೆ ಎರಡು ವರ್ಷಗಳ ಹಿಂದೆ ದೂರುಗಳು ಬಂದದ್ದು ನಿಜ ಆ ದೂರುಗಳನ್ನು ಸರಿಪಡಿಸಿ ಈ ಎರಡು ವರ್ಷಗಳಲ್ಲಿ ಕೆಲಸ ತುಂಬಾ ವೇಗವಾಗಿ ನಡೆಯುತ್ತಿದೆಯೆಂದು ಅನೇಕ ಸದಸ್ಯರು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ ಈ ಕರಾರಿನಲ್ಲಿ ಒಂದನ್ನು 31-12-2001ಕ್ಕೆ ಮುಂದುವರೆಸಲಾಗಿದ ಅದನ್ನು ಪೂರ್ತಿಸುವ ಜವಾಬ್ದಾರಿಯನ್ನು ಅವರು ಹೊತ್ತುಕೊಂಡಿದ್ದಾರೆ ಆ ಕೆಲಸ ಮುಗಿಯಬೇಕಾಗಿತ್ತು ಆದರೆ ವರ್ತುಲ ರಸ್ತೆ 17 35 ಕಿ ಮೀ ನ ಡಾಂಬರೀಕರಣದ ಕಲಸ ಹೆಚ್ಚು ಕಮ್ಮಿ ಪೂರ್ಣವಾಗಿದೆ ಮೊದಲು ಹೇಳಿದ್ದು ಮಧ್ಯಂತರ ವರ್ತುಲ ರಸ್ತೆಯದು ಮಾರ್ಚ್ 2002ರ ವೇಳೆಗೆ 1 2ಽ ಕಿ ಮೀ ರಸ್ತೆಯ ಡಾಂಬರೀಕರಣವನ್ನು ಮುಗಿಸಲಾಗುವುದು ನಗರದ ರಸ್ತೆಯಲ್ಲಿ 38 ೪ ಕಿ ಮೀನಷ್ಟು ಕೆಲಸ ಮುಗಿದಿದ್ದು ಉಳಿದ 19 7 ಕಿ ಮೀ ರಸ್ತೆ ಡಾಂಬರೀಕರಣದ ಕೆಲಸವನ್ನು ಮೇ 2002ರಲ್ಲಿ ಪೂರ್ಣಗೊಳಿಸುವ ಭರವಸೆಯನ್ನು ಕೊಡುತ್ತೇನೆ ಕೆಲಸವು ವಿಳಂಬವಾಗಲು ಸ್ವಲ್ಪಮಟ್ಟಿಗೆ

ಕಾರ್ಪೊರೇಷನ್ ಸಹ ಕಾರಣವಾಗಿದೆ ಸ್ವಲ್ಪಮಟ್ಟಿಗೆ ಗುತ್ತಿಗೆದಾರರೂ ಕಾರಣರಾಗಿದ್ದಾರೆ ಮರಗಳನ್ನು ಕಡಿಯಲು ಪರವಾನಗಿ ತರುವಲ್ಲಿ ಸ್ವಲ್ಪ ವಿಳಂಬವಾಗಿದೆ ನಗರಪಾಲಿಕೆಯವರು ಸಮಯಕ್ಕೆ ಸರಿಯಾಗಿ ಭೂಸ್ವಾಧೀನವನ್ನು ಕನ್‌ಸ್ಟ್ರಕ್ಷನ್ ಕಂಪನಿಯವರಿಗೆ ವಹಿಸಿಕೊಡದಿರುವುದು, ಹೀಗೆ ಎರಡು ಮೂರು ಕಾರಣಗಳಿಂದ ಸ್ವಲ್ಪ ವಿಳಂಬವಾಗಿದೆ ತಾವು ಹೇಳಿದಂತೆ ಬಡ್ಡಿ ಕೂಟ್ಟು ಹಣವನ್ನು ತಂದು ಈ ಕೆಲಸವನ್ನು ಮಾಡುತ್ತಿದ್ದೇವೆ ಶೇಕಡ 12ರಷ್ಟು ಬಡ್ಡಿ ಕೊಟ್ಟು ಮುಂದೆ ಈ ಹಣವನ್ನು ತೀರಿಸಬೇಕು ಈ ಹಣದಲ್ಲಿ ಶೇಕಡ 70ರಷ್ಟು ಸಾಲ, 30ರಷ್ಟು ಸಬ್ಸಿಡಿ ರೂಪದಲ್ಲಿ ಒದಗಿಸಿದ್ದಾರೆ ಎಷ್ಟು ತ್ವರಿತವಾಗಿ ಈ ಕಾಮಗಾರಿಯನ್ನು ಮುಗಿಸಬೇಕೆಂಬ ತಮ್ಮ ಅಪೇಕ್ಷೆ ಇದೆಯೋ ಅದಕ್ಕಿಂತಲೂ ವೇಗವಾಗಿಯೇ ಈ ಕಾಮಗಾರಿಯ ಕೆಲಸವನ್ನು ಮುಗಿಸುತ್ತೇವೆಂಬ ಭರವಸೆಯನ್ನು ಈ ಸದನದ ಮೂಲಕ ಅವರಿಗೆ ಕೊಡುತ್ತಿದ್ದೇನೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಕೆಲಸ ವಿಳಂಬವಾಗಿದ್ದರಿಂದ ಅದಕ್ಕೆ ಎಸ್ಕಲೇಷನ್ ಚಾರ್ಜಸ್‌ನ್ನು ಕ್ಲೈಮ್ ಮಾಡುತ್ತಾರೆ ಅದನ್ನು ಕೊಡಲು ಸರ್ಕಾರ ಸಿದ್ಧವಿದೆಯೇ? ವಿಳಂಬ ಮಾಡಿರುವವರು ಗುತ್ತಿಗೆದಾರರು ಪುನಃ ಪುನಃ ಅವರ ಮೇಲೆ ಒತ್ತಡವನ್ನು ಹಾಕಿ ಎಸ್ಕಲೇಷನ್ ಚಾರ್ಜಸ್‌ನ್ನು ಕ್ಲೇಮ್ ಮಾಡಿದರೆ ಸರ್ಕಾರ ಕೊಡಲು ತಯಾರಿದೆಯೇ? ಗುಣಮಟ್ಟ ಹೇಗಿದೆ ಎಂಬುದನ್ನು ಪರೀಕ್ಷೆ ಮಾಡಲು ಕ್ವಾಲಿಟಿ ಕಂಟ್ರೋಲ್ ಅನ್ನು ಏನಾದರೂ ನೇಮಕವೇನಾದರೂ ಮಾಡಿದ್ದೀರಾ

ಶ್ರೀ ಡಿ ಬಿ ಚಂದ್ರೇಗೌಡ ಗುಣಮಟ್ಟವನ್ನು ಸ್ಥಿರೀಕರಿಸಿದ ಮೇಲೆಯೇ ಗುತ್ತಿಗೆದಾರರಿಗೆ ಹಣವನ್ನು ಕೊಟ್ಟಿರತಕ್ಕದ್ದು ಎಲ್ಲೆಲ್ಲಿ ಗುಣಮಟ್ಟದ ದೋಷಗಳು ಕಂಡುಬಂದಿವೆಯೋ ಅಲ್ಲಿ ಹಣವನ್ನು ಮರುಪಾವತಿ ಮಾಡಿಲ್ಲ ಎರಡನೆಯದಾಗಿ, ಎಸ್ಕಲೇಷನ್ ಬಗ್ಗೆ ಗುತ್ತಿಗೆದಾರರು ಕೇಳಿದರೆ ಅದು ನ್ಯಾಯಸಮ್ಮತವಾಗಿದ್ದಲ್ಲಿ ಪರಿಶೀಲನೆ ಮಾಡಬಹುದು ಗುತ್ತಿಗೆದಾರರೇ ಕೇಳದಿರುವ ಪ್ರಶ್ನೆಯನ್ನು ತಾವೇಕೆ ಕೇಳಿದಿರೋ ಗೊತ್ತಾಗುತ್ತಿಲ್ಲ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ನಮಗೆ ತಿಳಿದುಬಂದ ಪ್ರಕಾರ ಹೇಳುತ್ತಿದ್ದೇವೆ ಇದರಲ್ಲಿ ವಸ್ತು ಸ್ಥಿತಿ ಇರಬಹುದು ಇಲ್ಲದಿರಬಹುದು, ಎಸ್ಕಲೇಷನ್ ಕಾಸ್ಟ್ ಕೇಳುತ್ತಿದ್ದಾರೆಂದು ಇಂಜಿನಿಯರ್‌ಗಳು ಹೇಳುತ್ತಿದ್ದಾರೆ ಆ ರೀತಿ ಎಸ್ಕಲೇಷನ್ ಕಾಸ್ಟ್ ಕೇಳಿದರೆ ಕೊಡಲು ಸರ್ಕಾರ ತಯಾರಿದೆಯೇ?

ಶ್ರೀ ಡಿ ಬಿ ಚಂದ್ರೇಗೌಡ ನಮಗೆ ಆ ರೀತಿ ಯಾವುದೇ ಕೋರಿಕೆ ಬಂದಿಲ್ಲ

ಮೈಸೂರು ತಾಲ್ಲೂಕಿನಲ್ಲಿ ಪೊಲೀಸ್ ಠಾಣೆಗಳ ಪ್ರಾರಂಭ